# ಯಕ್ಷಲೋಕದಲ್ಲಿ ಕೀರ್ತಿ ಶಿಖರಕ್ಕೇರಿದ್ದ ಧಾರೇಶ್ವರ

**ಬಡಗುತಿಟ್ಟು ಯಕ್ಷಗಾನದ ಭಾಗವತಿಕೆಯಲ್ಲಿ ಕೀರ್ತಿ ಶಿಖರಕ್ಕೇರಿದ ಸುಬ್ರಹ್ಮಣ್ಯ ಧಾರೇಶ್ವರ ಯಕ್ಷಲೋಕ ಬಿಟ್ಟು ಅಗಲಿದ್ದಾರೆ. ಬೆರಳೆಣಿಕೆಯಷ್ಟು ಇದ್ದ ಅತ್ಯುತ್ತಮ ಭಾಗವತರಲ್ಲಿ ಒಬ್ಬರಾಗಿದ್ದ ಧಾರೇಶ್ವರ ಅವರಿನ್ನು ನೆನಪಷ್ಟೆ.**

■ ಉಮಾ ವೇಣೂರು



ಅದು 70ರ ದಶಕ. ಕುಂದಾಪುರದ ಕೋಟದಲ್ಲಿ ಕಾಳಿಂಗ ನಾವಡರು ಅಮೃತೇಶ್ವರಿ ಎಂಬ ಮೇಳದಲ್ಲಿ ಪ್ರಧಾನ ಭಾಗವತರಾಗಿದ್ದರು. ಯಕ್ಷಗಾನದಲ್ಲಿ ಕೀರ್ತಿ, ಯಶಸ್ಸಿನ ಉತ್ತುಂಗದಲ್ಲಿ ಇರುವಾಗಲೇ ರಸ್ತೆ ಅಪಘಾತದಲ್ಲಿ ಅತಿ ಚಿಕ್ಕ ವಯಸ್ಸಿಗೇ ಅಸುನೀಗಿದ ಕಾಳಿಂಗ ನಾವಡ ಅವರ ಸಾವು ಆಗ ಯಕ್ಷ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿತ್ತು. ಈ ನಿರ್ವಾತವನ್ನು ಸುಬ್ರಹ್ಮಣ್ಣ ಧಾರೇಶ್ವರ ಅವರು ತುಂಬಿ ಕಾಳಿಂಗ ನಾವಡರ ಹಾದಿಯಲ್ಲೇ ಕೀರ್ತಿಯ ಶಿಖರಕ್ಕೇರಿದರು. ಸುಮಾರು 46 ವರ್ಷಗಳ ಕಾಲ ಯಕ್ಷಗಾನದಲ್ಲಿ ಸೇವೆ ಸಲ್ಲಿಸಿದ ಧಾರೇಶ್ವರ ಅವರು ಬಡಗುತಿಟ್ಟು ಯಕ್ಷಗಾನದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಿದ್ದರು.

ಆಗ ಯಕ್ಷಗಾನ, ಬಯಲಾಟ, ತಾಳಮದ್ದಲೆ, ಟೆಂಟ್ ನಾಟಕಗಳು ಹೆಚ್ಚು ಪ್ರಚಲಿತದಲ್ಲಿದ್ದ ಕಾಲ. ಯಕ್ಷಗಾನದಲ್ಲಿ ಪೌರಾಣಿಕ ಪ್ರಸಂಗಗಳನ್ನು ರಾತ್ರಿಯಿಡೀ ಆಡಿ ತೋರಿಸಿದಾಗ ಪ್ರೇಕ್ಷಕರಿಗೆ ಎಲ್ಲಿಲ್ಲದ ಖುಷಿ. ಮೇಳದಲ್ಲಿ ಭಾಗವತರು ಚೆಂಡೆ ಮದ್ದಲೆ ಸಹಕಾರದೊಂದಿಗೆ ಚೆನ್ನಾಗಿ ಹಾಡಿದರೆಂದರೆ ಅಂದಿನ ಆಟ ಗೆದ್ದಂತೆ. ಭಾಗವತರು ಜಾಗಟೆ ಹಿಡಿದು ಮೊದಲಿಗೆ ‘ಗಜಮುಖನನ್ನು ನೆನೆದು ಸ್ತುತಿ ಮಾಡಿದರೆಂದರೆ ಕಥಾ ಪ್ರಸಂಗ ಆರಂಭವಾದಂತೆ. ಇದಕ್ಕೆ ಪೂರಕವಾಗಿ ಪಾತ್ರಧಾರಿಗಳು ಅಷ್ಟೇ ರಸವತ್ತಾಗಿ ಅರ್ಥ ಹೇಳಿದಾಗ ಯಕ್ಷಗಾನ ಕಳೆ ಕಟ್ಟಿದಂತೆಯೇ.

ಭಾಗವತಿಕೆಯಲ್ಲಿ ಸುಬ್ರಹ್ಮಣ್ಣ ಧಾರೇಶ್ವರ ಅವರು ‘ಗಟ್ಟಿಕುಳ’. ಮೊದಲು ಕುಂದಾಪುರದ ಅಮೃತೇಶ್ವರಿ ಮೇಳದಲ್ಲಿ, ಬಳಿಕ ಹಿರೇಮಹಾಲಿಂಗೇಶ್ವ ಹಾಗೂ ಶಿರಸಿ ಮೇಳದಲ್ಲಿ ಭಾಗವತರಾದರು. ಆಮೇಲೆ ಪೆರ್ಡೂರು ಮೇಳ ಸೇರಿದ ಧಾರೇಶ್ವರ ಅವರು ಇಲ್ಲಿ ಸುದೀರ್ಘ 28 ವರ್ಷ ಕಾಲ ಪ್ರಧಾನ ಭಾಗವತರಾಗಿಯೇ ಸೇವೆ ಸಲ್ಲಿಸಿದ್ದು ಕಂಚಿನ ಕಂಠದ ಹಾಡಿಗೆ ಹೆಸರಾಗಿದ್ದರು.

1957 ಸೆಪ್ಟೆಂಬರ್ ಐದರಂದು ಗೋಕರ್ಣದಲ್ಲಿ ಜನಿಸಿದ ಧಾರೇಶ್ವರ ಮೊದಲು ಸಂಗೀತ ಕಲಿತು ಕಛೇರಿಗಳನ್ನೂ ನೀಡುತ್ತಿದ್ದರು. ಮೊದಲು ಯಕ್ಷಗಾನ ಸೆಟ್‌ನಲ್ಲಿ ಲೈಟಿಂಗ್ ವ್ಯವಸ್ಥೆ ಮಾಡಲು ಎಲೆಕ್ಟ್ರೀಷಿಯನ್ ಆಗಿಯೂ ದುಡಿದಿದ್ದರು. ರಂಗಸ್ಥಳದ ಮೇಲೆ ನಾರಣಪ್ಪ ಉಪ್ಪೂರರ ಸಹಾಯದಿಂದ ಏರಿ ‘ರಂಗ ಮಾಂತ್ರಿಕ’ ಎಂದೂ ಹೆಸರು ಗಳಿಸಿದರು.

ಯಕ್ಷಗಾನ ರಂಗಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ಉದ್ದೇಶದಿಂದ ‘ಧಾರೇಶ್ವರ ಯಕ್ಷ ಬಳಗ’ ಸ್ಥಾಪಿಸಿದರು. ಈ ಮೂಲಕ ಯಕ್ಷಗಾನ ಪ್ರಸಂಗ, ಭಾಗವತಿಕೆಗಾಗಿ ಯಕ್ಷ ಪದ್ಯವನ್ನೂ ಸಂಯೋಜಿಸುತ್ತಿದ್ದರು. ಪುರಂದರದಾಸ, ಕನಕದಾಸ, ಬಸವಣ್ಣ, ಚೆನ್ನಮಲ್ಲಿಕಾರ್ಜುನರ ರಚನೆಗಳನ್ನೂ ಯಕ್ಷಶೈಲಿಯಲ್ಲಿ ಹಾಡಿದ್ದು ವಿಶೇಷ ಗಮನ ಸೆಳೆದಿತ್ತು. ಕುವೆಂಪು, ಬೇಂದ್ರೆಯವರ ಹಾಡುಗಳೂ ಯಕ್ಷಗಾನದ ಹಾಡುಗಳಾಗಿದ್ದು ಧಾರೇಶ್ವರರ ಕಂಠದಲ್ಲಿಯೇ ಎನ್ನುವುದು ಗಮನಾರ್ಹ. ಅಮೃತ ವರ್ಷಿಣಿ, ಸಿಂಧೂರ ಭಾಗ್ಯ, ರಕ್ತ ತಿಲಕ, ಶೂದ್ರ ತಪಸ್ವಿನಿ, ಚಾರು ಚಂದ್ರಿಕೆ, ಗಗನ ಗಾಮಿನಿ, ವಸಂತ ಸೇನೆ ಮುಂತಾಗಿ ಸುಮಾರು 300ಕ್ಕೂ ಹೆಚ್ಚು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಯಕ್ಷ ಪ್ರಸಂಗಗಳನ್ನು ನಿರ್ದೇಶಿಸಿದ್ದರು. ಇವರು ನಿರ್ದೇಶಿಸಿದ ಎಲ್ಲ ಪ್ರಸಂಗಗಳೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಅಲ್ಲದೆ 400ಕ್ಕೂ ಅಧಿಕ ಧ್ವನಿಮುದ್ರಣಗಳಲ್ಲಿ ಧಾರೇಶ್ವರ ಅವರ ಯಕ್ಷಗಾನದ ಹಾಡುಗಳು ಕೇಳುಗರನ್ನು ರಂಜಿಸಿದೆ.

‘ವೃತ್ತಿ ರಂಗಭೂಮಿಯಲ್ಲಿ ತುಂಬ ಹೆಸರು ಮಾಡಿದವರು. ಬಹಳ ಜನಪ್ರಿಯತೆ ಅವರಿಗೆ ಸಿಕ್ಕಿತ್ತು. ಭಾಗವತಿಕೆಯಲ್ಲಿ ಸಂಪ್ರದಾಯವನ್ನು ಬಿಟ್ಟು ಅವರದೇ ಶೈಲಿ ರೂಢಿಸಿಕೊಂಡು ಹೆಸರು ಮಾಡಿದ್ದರು. ಯಕ್ಷ ಪರಂಪರೆ ಬಿಟ್ಟು ತಮ್ಮದೇ ಹಾದಿ ಕಂಡುಕೊಂಡು ಯಶಸ್ಸನ್ನೂ ಸಾಧಿಸಿದ್ದರು. ನಾಡಿನಾದ್ಯಂತ ಹಲವಾರು ಅಭಿಮಾನಿ ಬಳಗವನ್ನೂ ಹೊಂದಿದ್ದರು’ ಎಂದು ಹೇಳುತ್ತಾರೆ ಯಕ್ಷಗಾನದ ಹಿರಿಯ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ.

‘ಮೇಳದಲ್ಲಿ, ಗಾನ ಪರಂಪರೆ ಎಂಬುದು ಬಹಳ ದೊಡ್ಡದು. ಇದರಿಂದ ಆಚೆ ಕೆಲಸ ಮಾಡುವುದು, ಹೊಸ ಪ್ರಯೋಗಗಳನ್ನು ಮಾಡುವುದು ಕಲಾವಿದನ ಸಾಮರ್ಥ್ಯಕ್ಕೆ ಬಿಟ್ಟ ವಿಚಾರ. ಇದನ್ನು ಧಾರೇಶ್ವರ ಅವರು ರೂಢಿಸಿಕೊಂಡಿದ್ದರು’ ಎಂದೂ ಹೇಳುತ್ತಾರೆ ಅವರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೂ ಭಾಜನರಾಗಿದ್ದರು. ಏಪ್ರಿಲ್ 25ರಂದು ಯಕ್ಷಲೋಕವನ್ನು ಬಿಟ್ಟು ಅಗಲಿದ ಧಾರೇಶ್ವರ ಇನ್ನು ನೆನಪು ಮಾತ್ರ. ■